**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ.ಸಿ.ನಂಃ 1157/2024**

**ಫಿರ್ಯಾದುದಾರರು:** ಸರಕಾರದ ಪರವಾಗಿ,
ಭಟ್ಕಳ ಗ್ರಾಮೀಣ ಪೋಲಿಸ್ ಠಾಣೆ, ಭಟ್ಕಳ.

**– ವಿರುದ್ಧ –**

**ಆರೋಪಿ:** ಸುಕ್ರಯ್ಯ ತಂದೆಃ ನಾರಾಯಣ ದೇವಾಡಿಗ,
ವಯಸ್ಸುಃ 36 ವರ್ಷ, ವೃತ್ತಿಃ ಗಾರೆ ಕೆಲಸ,
ಸಾಃ ಜೋಗಿಮನೆ, ಮುಂಡಳ್ಳಿ, ಭಟ್ಕಳ.

**ಃ ದೋಷಾರೋಪಣೆ ಃ**

ಶ್ರೀಮತಿ.ಧನವತಿ. ಬಿ.ಎ.,(ಲಾ)ಎಲ್‌ಎಲ್‌ಬಿ., ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿ, ಭಟ್ಕಳ ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ಭಟ್ಕಳ ಗ್ರಾಮೀಣ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಭಟ್ಕಳ ತಾಲೂಕು ಮುಂಡಳ್ಳಿ ಗ್ರಾಮದ ಜೊಗಿಮನೆ ರಸ್ತೆ ಮಕ್ಕಿಮಠದಲ್ಲಿರುವ ಪಿರ್ಯಾದಿ ಶೋಭಾ ಕೋಂಃ ಮಂಜುನಾಥ ದೀಕ್ಷಿತ್ ರವರು ವಾಸ ಮಾಡಿಕೊಂಡಿರುವ ಮನೆ ನಂ. 208 ನೇದರಲ್ಲಿ ದಿನಾಂಕ 30-11-2023 ರಂದು ರಾತ್ರಿ 07-00 ಗಂಟೆಗೆ ಆರೋಪಿಯಾದ ನೀವು ಕಳ್ಳತನ ಮಾಡುವ ಉದ್ದೇಶದಿಂದ ಬಂದವನು ಮನೆಯ ಹೊರಗಿನ ಮೆಟ್ಟಿಲುಗಳ ಮೂಲಕ ಮಹಡಿಗೆ ಬಂದು ಮಹಡಿಯ ಕೋಣೆಯ ಬಾಗಿಲಿನ ಚಿಲಕವನ್ನು ತೆರೆದ ಕಿಟಕಿಯ ಮೂಲಕ ಕೈ ಹಾಕಿ ತೆಗೆದು ಮನೆಯ ಒಳಗೆ ಅತಿಕ್ರಮ ಪ್ರವೇಶ ಮಾಡಿ, ಆ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ 457 ರಡಿಯಲ್ಲಿ** ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಕೊನೆಯದಾಗಿ ಅದೇ ದಿನ, ಅದೇ ಸಮಯ ಮತ್ತು ಸ್ಥಳದಲ್ಲಿ, ನೆಲ ಮಹಡಿಯ ಬೆಡ್ ರೂಮಿನಲ್ಲಿದ್ದ ಕಪಾಟಿನಲ್ಲಿ ಇಟ್ಟಿದ್ದ ಪಿರ್ಯಾದಿಯವರ ಒಟ್ಟೂ 47.030 ಗ್ರಾಂ ತೂಕದ ಬಂಗಾರದ ಆಭರಣಗಳನ್ನು ಆರೋಪಿಯಾದ ನೀವು ಕಳ್ಳತನ ಮಾಡಿಕೊಂಡು ಹೋಗಿ, ಆ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ 380 ರಡಿಯಲ್ಲಿ** ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಸಹಿ ಇದೆ/-
(**ಶ್ರೀಮತಿ.ಧನವತಿ**)
ಹೆಚ್ಚುವರಿ ಸಿವಿಲ್ ಜಡ್ಜ ಮತ್ತು
ನ್ಯಾಯಿಕ ದಂಡಾಧಿಕಾರಿ, ಭಟ್ಕಳ.

ದಿನಾಂಕಃ 19-01-2026

ಹೆಚ್ಚುವರಿ **ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ.ಸಿ.ನಂಃ 1157/2024**

**ಫಿರ್ಯಾದುದಾರರು:** ಸರಕಾರದ ಪರವಾಗಿ,
ಭಟ್ಕಳ ಗ್ರಾಮೀಣ ಪೋಲಿಸ್ ಠಾಣೆ, ಭಟ್ಕಳ.

**– ವಿರುದ್ಧ –**

**ಆರೋಪಿ:** ಸುಕ್ರಯ್ಯ ತಂದೆಃ ನಾರಾಯಣ ದೇವಾಡಿಗ,

## : ಆರೋಪಣೆ :

ಪ್ರಶ್ನೆ –1ಃ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿದ್ದೀರಾ ?

ಉತ್ತರ – ಹೌದು

ಪ್ರಶ್ನೆ –2ಃ ತಪ್ಪೊಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ ?

ಉತ್ತರ – ಇಲ್ಲ. ವಿಚಾರಣೆಯಾಗಬೇಕು.

(ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದ್ರಿ ಆರೋಪಿತರು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸಿರುತ್ತೇನೆ.)

ಸಹಿ ಇದೆ/*
ಹೆಚ್ಚುವರಿ ಸಿವಿಲ್ ಜಡ್ಜ ಮತ್ತು
ನ್ಯಾಯಿಕ ದಂಡಾಧಿಕಾರಿ, ಭಟ್ಕಳ.

ದಿನಾಂಕಃ 19–01–2026